ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು, ಕರೂರು ಇವರ ನ್ಯಾಯಾಲಯ, ಕರೂರು.

ಸಂ/ಕಂ/ಹ.ಬ.ವಿವಾದ/138/2014-15 ದಿನಾಂಕ:01/07/2016

ಉಪಸ್ಥಿತರು: ಜಿ.ಬೈರಣ್ಣ
ಉಪ ತಹಶೀಲ್ದಾರರು, ಕರೂರು.

| ವಾದಿಗಳು | ಪ್ರತಿವಾದಿಗಳು |
|---|---|
| 1) ಶಿವಪ್ಪ ತಂದೆ ಬೀಮಣ್ಣ<br>2) ಈರಣ್ಣ ತಂದೆ ಬೀಮಣ್ಣ ದಾಸಪುರ ಗ್ರಾಮ ಸಿರುಗುಪ್ಪ ತಾಲೂಕು | 1) ಕಿಲ್ಲೇದಾರು ರಾಮಣ್ಣ ತಂದೆ ಬುಳ್ಳಪ್ಪ ಪೋಪ್ಪನಾಳ್ ಗ್ರಾಮ, ಸಿರುಗುಪ್ಪ ತಾಲೂಕು |

ದಾವಾ ಜಮೀನಿನ ವಿವರ:

| ಗ್ರಾಮದ ಹೆಸರು | ಸರ್ವೆ ನಂ | ವಿಸ್ತೀರ್ಣ (ಎಕರೆ) | ಹ.ಬ ಸಂಖ್ಯೆ | ವಹಿವಾಟು ಸಂಖ್ಯೆ |
|---|---|---|---|---|
| ಉಪ್ಪಾರ್ ಹೊಸಹಳ್ಳಿ ಗ್ರಾಮ | 7/ಎ | 8.93 | ಹೆಚ್73/2013-14 | 172/2013-14 |

ಟಿಪ್ಪಣಿ:

ಸಿರುಗುಪ್ಪ ತಾಲೂಕಿನ ಉಪ್ಪಾರ್ ಹೊಸಹಳ್ಳಿ ಗ್ರಾಮದ ಸರ್ವೆ ನಂ: 7/ಎ ವಿಸ್ತೀರ್ಣ: 8.93 ಜಮೀನುಗೆ ಸಂಬಂಧಿಸಿದಂತೆ ಪೋತಿ ವಾರಸ್ಸತದ, ಪಾಲು ವಿಭಾಗದ ಪ್ರಕಾರ 1) ಶಿವಪ್ಪ ತಂದೆ ಭೀಮಣ್ಣ ಇವರಿಗೆ ವಿಸ್ತೀರ್ಣ 4.47 ಮತ್ತು 2) ಈರಣ್ಣ ತಂದೆ ಭೀಮಣ್ಣ ಇವರಿಗೆ ವಿಸ್ತೀರ್ಣ 4.46 ಜಮೀಗಳು ಇವರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಲು ನಮೂನೆ-21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ ಕಿಲ್ಲೇದಾರು ರಾಮಣ್ಣ ತಂದೆ ಬುಳ್ಳಪ್ಪ ಪೋಪ್ಪನಾಳ್ ಗ್ರಾಮ ಇವರು ದಿನಾಂಕ 01-03-2014 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ, ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸು ನೀಡುತ್ತಾ ವಿಚಾರಣೆಯನ್ನು ದಿನಾಂಕ: 14-08-2015, 28-12-2015, 22-01-2015, 29-04-2016, 13-05-2016, 20-05-2016, ಮತ್ತು 27-05-2016, 10-06-2016 ಮತ್ತು 24-06-2016 ರಂದು ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲಾಯಿತು ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

01/08/16

ವಾದಿಗಳು:

ವಾದಿಗಳಾದ ಶಿವಪ್ಪ ತಂದೆ ಕಿಲ್ಲೇದಾರ ಭೀಮಣ್ಣ ದಾಸಾಪುರ ಗ್ರಾಮ ಇವರು ಉಪ್ಪಾರಹೊಸಹಳ್ಳಿ ಗ್ರಾಮದ ಸರ್ವೆ ನಂಬರ್ 7/ಎ ವಿಸ್ತೀರ್ಣ 8.93 ಸೇಂಟ್ಸ್ ಜಮೀನು ಕಿಲ್ಲೇದಾರ ಭೀಮಣ್ಣ ತಂದೆ ವೀರಣ್ಣ ಮೋಪನಾಳ್ ಗ್ರಾಮ ಇವರ ಹೆಸರಿನಲ್ಲಿ ಪಟ್ಟ ಇದ್ದು ಇವರು ಮತ್ತು ಹೆಂಡತಿಯಾದ ಶ್ರೀಮತಿ ಮುದ್ದಮ್ಮ ಗಂಡ ಕಿಲ್ಲೇದಾರ್ ಭೀಮಣ್ಣ ಮೃತಪಟ್ಟಿರುತ್ತಾರೆ ಇವರಿಗೆ ಶಿವಪ್ಪ ಮತ್ತು ಈರಣ್ಣ ಇಬ್ಬರು ಗಂಡು ಸಂತಾನ ಮಾತ್ರ ಉತ್ತರ ವಾರಸುದಾರರು ಇರುತ್ತೇವೆ ಸದರಿ ಜಮೀನು ಕುಟುಂಬ ವಿಭಾಗ ಪ್ರಕಾರ ಈರಣ್ಣ ತಂದೆ ಭೀಮಣ್ಣ ಭಾಗಕ್ಕೆ ವಿಸ್ತೀರ್ಣ 4.46 ಹಾಗೂ ಶಿವಪ್ಪ ತಂದೆ ಭೀಮಣ್ಣ ಭಾಗಕ್ಕೆ ವಿಸ್ತೀರ್ಣ 4.47 ಸೇಂಟ್ಸ್ ಎಂದು ಭೂಮಿ ಹಂಚಿಕೆ ಮಾಡಿಕೊಂಡ ಪ್ರಕಾರ ಪಟ್ಟ ವರ್ಗಾವಣೆ ಮಾಡುವ ಸಂಧರ್ಭದಲ್ಲಿ ಕಿಲ್ಲೇದಾರ ರಾಮಣ್ಣ ತಂದೆ ಬುಳ್ಳಪ್ಪ ವಿನಾಕಾರಣ ನಮಗೆ ಮಾನಸಿಕ ಹಿಂಸೆ ನೀಡುವ ದುರುದ್ದೇಶದಿಂದ ತಕರಾರು ಅರ್ಜಿ ಸಲ್ಲಿಸಿರುತ್ತಾರೆ ತಕರಾರು ಅರ್ಜಿ ತಳ್ಳಿ ಹಾಕಿ ನಮ್ಮ ಹೆಸರಿಗೆ ಪಾಲು ವಿಭಾಗ ಪ್ರಕಾರ ಪಟ್ಟ ವರ್ಗಾವಣೆ ಮಾಡಲು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು

ಪ್ರತಿವಾದಿಗಳಾದ ಕಿಲ್ಲೇದಾರು ರಾಮಣ್ಣ ತಂದೆ ಬುಳ್ಳಪ್ಪ ಮೋಪನಾಳ್ ಗ್ರಾಮ ಇವರು ಉಪ್ಪಾರಹೊಸಹಳ್ಳಿ ಗ್ರಾಮದ ಸರ್ವೆ ನಂಬರ್ 7/ಎ ವಿಸ್ತೀರ್ಣ 8.93 ಸೇಂಟ್ಸ್ ಜಮೀನು ಕಿಲ್ಲೇದಾರ ಭೀಮಣ್ಣ ತಂದೆ ವೀರಣ್ಣ ಮೋಪನಾಳ್ ಗ್ರಾಮ ಇವರ ಹೆಸರಿನಲ್ಲಿ ಪಟ್ಟ ಇದ್ದು ಕಿಲ್ಲೇದಾರ ಭೀಮಣ್ಣ ಇವರ ಹೆಂಡತಿಯಾದ ಶ್ರೀಮತಿ ಮುದ್ದಮ್ಮ ಗಂಡ ಕಿಲ್ಲೇದಾರ ಭೀಮಣ್ಣ ಮೃತಪಟ್ಟಿರುತ್ತಾರೆ ಸದರಿ ಜಮೀನು ಕುಟುಂಬ ವಿಭಾಗದಂತೆ ಈರಣ್ಣ ತಂದೆ ಭೀಮಣ್ಣ ಭಾಗಕ್ಕೆ ವಿಸ್ತೀರ್ಣ 4.46 ಹಾಗೂ ಶಿವಪ್ಪ ತಂದೆ ಭೀಮಣ್ಣ ಭಾಗಕ್ಕೆ ವಿಸ್ತೀರ್ಣ 4.47 ಸೇಂಟ್ಸ್ ಎಂದು ಹಂಚಿಕೆ ಮಾಡಿಕೊಂಡ ಪ್ರಕಾರ ಪಟ್ಟ ವರ್ಗಾವಣೆ ಮಾಡುವ ಸಂಧರ್ಭದಲ್ಲಿ ಸದರಿ ಜಮೀನುದಲ್ಲಿ ನನಗೂ ಪಾಲು ಬರಬೇಕೆಂಬ ಕಾರಣದಿಂದ ದಿನಾಂಕ 01-03-2014 ರಂದು ತಕರಾರು ಅರ್ಜಿ ಸಲ್ಲಿಸಿರುತ್ತೇನೆ ಈಗ ದೊಡ್ಡ ಮನುಷ್ಯರ ಪರಿಹಾರ ಮಾಡಿದ ಪ್ರಕಾರ ಈರಣ್ಣ ಭಾಗದ ಆಸ್ತಿಯನ್ನು ತದನಂತರ ನನಗೆ ನೊಂದಣಿ ಮಾಡಿ ಕೊಡುವಂತೆ ಪರಸ್ಪರರು ಒಪ್ಪಿರುವುದರಿಂದ ನನ್ನ ಆಕ್ಷೇಪಣೆ ಅರ್ಜಿಯನ್ನು ಹಿಂದಕ್ಕೆ ಪಡೆದಿರುತ್ತೇನೆ ಆದ್ದರಿಂದ ಸದ್ರಿ ಆಸ್ತಿ ಈರಣ್ಣ ತಂದೆ ಭೀಮಣ್ಣ ಭಾಗಕ್ಕೆ ವಿಸ್ತೀರ್ಣ 4.46 ಹಾಗೂ ಶಿವಪ್ಪ ತಂದೆ ಭೀಮಣ್ಣ ಎಂಬ ಭಾಗಕ್ಕೆ 4.47 ವಿಭಾಗ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಪ್ರಮಾಣ ಪತ್ರ ಸಲ್ಲಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಪೋತಿವಾರಸ್ವತದ ಪಾಲು ವಿಭಾಗ ಪ್ರಕಾರ ಹಕ್ಕು ಬದಲಾವಣೆ ಮಂಜೂರು ಮಾಡಲು ಈಕೆಳಕಂಡಂತೆ.

-::ಆದೇಶ::-

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಉಪ್ಪಾರಹೊಸಹಳ್ಳಿ ಗ್ರಾಮದ ಸರ್ವೇ ನಂಬರ್. 7/ಎ ವಿಸ್ತೀರ್ಣ 8.93 ಜಮೀನು ಪೋತಿವಾಸತ್ವದ ಪಾಲು ವಿಭಾಗ ಪ್ರಕಾರ 1) ಶಿವಪ್ಪ ತಂದೆ ಭೀಮಣ್ಣ ಇವರಿಗೆ ವಿಸ್ತೀರ್ಣ 4.47 2) ಈರಣ್ಣ ತಂದೆ ಭೀಮಣ್ಣ ಇವರಿಗೆ 4.46 ಗಳು ಇವರುಗಳ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ

ಈ ಆದೇಶವನ್ನು ದಿನಾಂಕ: 01-07-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು,
ಉಪ ತಹಶೀಲ್ದಾರರು,
ಕರೂರು.
ನಾಡ ಕಾರ್ಯಾಲಯ, ಕರೂರು.
ಸಿರುಗುಪ್ಪ ತಾಲ್ಲೂಕು

ಇದರ ಪ್ರತಿಯನ್ನು:
1.ವಾದಿ ಹಾಗೂ ಪ್ರತಿವಾದಿಗಳು.
2.ತಹಶೀಲ್ದಾರರ ಕಾರ್ಯಾಲಯ, ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನ ಕ್ರಮಕ್ಕಾಗಿ.